# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** ದಿನಾಂಕ: 22.07.2011

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇಂದು ಭಾರತೀಯ ರಾಜ್ಯ ವ್ಯಾಪಾರ ನಿಗಮ ನಿಯಮಿತ (State Trading Corporation of India Ltd.,) ಸಹಯೋಗದೊಂದಿಗೆ ವಾರ್ಡ್ ನಂ.43, ಭೈರವೇಶ್ವರ ಆಟದ ಮೈದಾನದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ವ್ಯಾಪಕವಾಗಿ ಸಸಿ ನೆಡುವ ಕಾರ್ಯ ಕೈಗೊಂಡು ಅವುಗಳನ್ನು ಪೋಷಿಸಿ ಬೆಳೆಸಿ ಪ್ರದೇಶವನ್ನು ಹಸಿರಾಗಿಸುವ ಮಹತ್ಕಾರ್ಯಕ್ಕೆ ಭಾರತೀಯ ರಾಜ್ಯ ವ್ಯಾಪಾರ ನಿಗಮ ಪಾಲಿಕೆಯೊಂದಿಗೆ ಸಹಕರಿಸಿ, ಟ್ರೀಗಾರ್ಡ್‌ಗಳನ್ನು ಖರೀದಿಸಲು ರೂ.10.00 ಲಕ್ಷಗಳನ್ನು ಪಾಲಿಕೆಗೆ ನೀಡಿದೆ.

ಈ ಸಂದರ್ಭದಲ್ಲಿ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಎಂ. ನಾಗರಾಜು ರವರು ಮಾತನಾಡಿ, ಈ ಪ್ರದೇಶದಲ್ಲಿ ಇನ್ನೂ ಹಲವಾರು ಅಭಿವೃದ್ಧಿ ಕೆಲಸಗಳು ಆಗಬೇಕಾಗಿದೆ. ಅದರಿಂದ ಉಪ ಮಹಾಪೌರರು ಮತ್ತು ಆಯುಕ್ತರು ಗಮನಹರಿಸಿ ಹೆಚ್ಚಿನ ಅನುದಾನ ನೀಡಬೇಕೆಂದು ಮನವಿ ಮಾಡಿದರು. ಮತ್ತು ಇಲ್ಲಿಯ ಎಲ್ಲಾ ಜನಪ್ರತಿನಿಧಿಗಳು ಪಾಲಿಕೆ ಆಯುಕ್ತರು ಮಳೆ ನೀರಿನ ಕೊಯ್ಲು ಮತ್ತು ಸಸಿ ನೆಡುವ ಒಂದು ಉತ್ತಮ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅದಕ್ಕೆ ನಾವೆಲ್ಲರೂ ಸಂಪೂರ್ಣವಾಗಿ ಸಹಕಾರ ನೀಡುವುದಾಗಿ ತಿಳಿಸಿದರು.

ಶಾಸಕರಾದ ಶ್ರೀ ನೆ.ಲ. ನರೇಂದ್ರಬಾಬು ರವರು ನಮ್ಮ ಭಾಗದಲ್ಲಿ ನವೀನ ಹಸಿರು ಕ್ರಾಂತಿ ಮಾಡುವ ನಿಟ್ಟಿನಲ್ಲಿ ಭಾರತೀಯ ರಾಜ್ಯ ವ್ಯಾಪಾರ ನಿಗಮ ಪಾಲಿಕೆಯೊಂದಿಗೆ ಕೈಜೋಡಿಸಿ, ಬೇರೆ ಬೇರೆ ಸರಕಾರಿ ಮತ್ತು ಖಾಸಗಿ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ. ಈ ಸಂಸ್ಥೆಯಲ್ಲಿ ಇರುವ ಎಲ್ಲಾ ಅಧಿಕಾರಿಗಳು ಪರಿಸರದ ಬಗ್ಗೆ ಬಹಳ ಕಾಳಜಿ ಹೊಂದಿದ್ದಾರೆ. ಅದರಿಂದಲೇ ಅವರ ಸಹಕಾರ ನೀಡಿದ್ದಾರೆಂದು ಅನಿಸುತ್ತದೆ ಎಂದರು. ನಾವೆಲ್ಲರೂ ಬೆಂಗಳೂರು ನನಗೆ ಏನು ಕೊಟ್ಟಿದೆ ಅನ್ನುವುದಕ್ಕಿಂತ ಹೆಚ್ಚಾಗಿ ಬೆಂಗಳೂರಿಗೆ ನಮ್ಮ ಕೊಡುಗೆ ಏನು ಎಂದು ನಾಗರಿಕರು ಪ್ರಶ್ನಿಸಿಕೊಳ್ಳಬೇಕೆಂದು ತಿಳಿಸಿದರು.

STC ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಶರ್ಮಾ ರವರು ಮಾತನಾಡಿ, ಬೆಂಗಳೂರು ಬಹಳ ಸುಂದರ ಮತ್ತು ಹಸಿರಿನಿಂದ ಕೂಡಿದ ನಗರವಾಗಿದೆ. ನಗರವನ್ನು ಇನ್ನಷ್ಟು ಹಸಿರೀಕರಣ ಮಾಡಲು ಹೊರಟಿರುವ ಪಾಲಿಕೆಯ ಪ್ರಯತ್ನಕ್ಕೆ ನಾವು ಬೆಂಬಲ ನೀಡಿದ್ದೇವೆ. ಮುಂದೆ ಕೂಡಾ ನಮ್ಮ ಸಹಕಾರ ಮುಂದುವರೆಯಲಿದೆ ಎಂದರು.

ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ರವರು ಮಾತನಾಡಿ, ತಮ್ಮ ಅನುದಾನದ ಹೆಚ್ಚಿನ ಭಾಗವನ್ನು ಈ ಪ್ರದೇಶದ ಶಾಲಾ ಕಾಲೇಜುಗಳ ಅಭಿವೃದ್ಧಿಗೆ ನೀಡುವುದಾಗಿ ತಿಳಿಸಿದರು.

ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಮಾತನಾಡಿ, STC ರವರು ಉದಾರ ಮನಸ್ಸಿನಿಂದ ಪಾಲಿಕೆಗೆ ರೂ.10.00 ಲಕ್ಷ ರೂ.ಗಳ ಸಹಾಯ ಮಾಡಿದ್ದಾರೆ. ಅವರ ಪರಿಸರದ ಬಗ್ಗೆ ಇರುವ ಬದ್ಧತೆಗೆ ಪ್ರಶಂಸೆ ವ್ಯಕ್ತಪಡಿಸಿದರು. ಈಗ ನಗರಕ್ಕೆ ಬೇಕಾಗಿರುವುದು ನೀರಿನ ಸಂರಕ್ಷಣೆ ಮತ್ತು ಸಸಿಗಳನ್ನು ನೆಡುವುದು ಅದನ್ನು ಪಾಲಿಕೆ ಈ ಹಿಂದೆ ಮಾಡಬೇಕಾಗಿತ್ತು. ನಾವು ಈಗ ಮಾಡುತ್ತಿದ್ದೇವೆ. ಇದಕ್ಕೆ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳ ಸಹಕಾರ ಅಗತ್ಯ ಎಂದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.07.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಇರುವ 35 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ವಿವಿಧ ಕಾಮಗಾರಿಗಳ ನಿರ್ವಹಣೆಯಿಂದ ಶೇಖರಣೆಯಾಗುವ ಹೂಳು, ಮಣ್ಣು ಹಾಗೂ ಭಗ್ನಾವಶೇಷಗಳನ್ನು (ಡೆಬ್ರಿಸ್) ವಿಲೇವಾರಿ ಮಾಡುವ ಸಲುವಾಗಿ "ದಾಸರಹಳ್ಳಿ ವಲಯ ವ್ಯಾಪ್ತಿಯ ಮಲ್ಲಸಂದ್ರದ ಕ್ವಾರಿಪಿಟ್" ಅನ್ನು ವಿಲೇವಾರಿ ಮಾಡುವ ಸ್ಥಳ (Dumping Yard) ಎಂದು ಗುರುತಿಸಲಾಗಿರುತ್ತದೆ.

ವಿಲೇವಾರಿ ಮಾಡಲು ಉದ್ದೇಶಿಸಿರುವ ಸದರಿ ಸ್ಥಳದ ಬಗ್ಗೆ ಸಾರ್ವಜನಿಕರಿಂದ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿನಗಳ ಒಳಗಾಗಿ ಜಂಟಿ ಆಯುಕ್ತರು (ಪಶ್ಚಿಮ), ಭಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು-560 020 ಇಲ್ಲಿಗೆ ಪತ್ರ ಮುಖೇನ ತಿಳಿಸುವುದು. 15 ದಿನಗಳ ಒಳಗೆ ಯಾವುದೇ ಆಕ್ಷೇಪಣೆ ಮತ್ತು ತಕರಾರುಗಳು ಈ ಕಛೇರಿಗೆ ತಲುಪದಿದ್ದಲ್ಲಿ ಸದರಿ ಸ್ಥಳವನ್ನು ವಿಲೇವಾರಿ ಮಾಡುವ ಸ್ಥಳವೆಂದು (Dumping Yard) ಸ್ಥಿರೀಕರಣಗೊಳಿಸಲಾಗುವುದು ಎಂದು ಜಂಟಿ ಆಯುಕ್ತರು (ಪಶ್ಚಿಮ) ವಲಯ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**